ಹೊಸತಲೆಮಾರಿಗೆ ಇರುತ್ತವೆ. ಮತ್ತೊಂದು ಮುಖ್ಯವಿಚಾರವೆಂದರೆ – ಲಂಕೇಶರು ನವ್ಯದ ಪ್ರಭಾವಗಳಿಂದ ಬಂದರೂ, ಎಂದಿಗೂ ಕರ್ನಾಟಕ ನೆಲದ ಕಸುವುಗಳನ್ನು ಮರೆಯುವುದಿಲ್ಲ. ದುರಂತವೆಂದರೆ, ಅವರ ಕಥನಗಳನ್ನು ಈಗಲೂ ನವ್ಯದ ಮಾನದಂಡಗಳ ಬೆನ್ನಲ್ಲಿ ಗ್ರಹಿಸುತ್ತಿರುವುದು. ವ್ಯಕ್ತಿಯೊಬ್ಬನ ಅಸ್ತಿತ್ವ, ಅಂತರ್ಮುಖತೆ, ಕಾಮದ ವಿವರಗಳು, ಪಲಾಯನ, ಮುಂತಾದ ವಿಚಾರಗಳು ಬಂದ ತಕ್ಷಣ 'ನವ್ಯದ ಆಶಯಗಳು' ಎಂದು ಕರೆದು ಬರಹಗಾರರನ್ನು ಕಟ್ಟಿಹಾಕುವುದು ಸರಿಯಾದುದಲ್ಲ. ನಮ್ಮಲ್ಲಿ ಆಕೃತಿಯ ತಾತ್ವಿಕತೆ ಬರೀ ನವ್ಯದ ರೋಗಕ್ಕೆ ತುತ್ತಾಗಿದೆ. ಆಕೃತಿಗಳು ಮನುಷ್ಯನ ಅಲೋಚನೆಗಳಿಗೆ, ಸಮಕಾಲೀನ ಸಂಗತಿಗಳಿಗೆ ಮತ್ತು ಬರಹಗಾರ ಬರೆಯುತ್ತಿದ್ದ ಸಂಸ್ಕೃತಿಯ ಒಳಹೊರಗುಗಳಿಗೆ ಹೇಗೆ ಎಡತಾಕಿವೆ ಎಂಬುದನ್ನು ಗ್ರಹಿಸಬೇಕಲ್ಲವೆ? ಕಥನಗಳು ಹೊರಡಿಸುವ ಸತ್ಯಗಳು ಓದುಗರನ್ನು ಯಾವುದೋ ಒಂದು ಚೌಕಟ್ಟಿಗೆ ಸಿಕ್ಕಿಸಬಾರದು. 'ಅಂದಿನ' ನವ್ಯ ವಿಮರ್ಶೆ, ಪರಂಪರೆಯನ್ನು ಗೌರವಿಸುತ್ತಲೇ ಕೃತಿ ಪರೀಕ್ಷೆಯಲ್ಲಿ 'ನವ್ಯ ವಿಮರ್ಶೆಯ' ಪರಿಕರಗಳನ್ನು ಪ್ರಬಲವಾಗಿ ಬಳಸಿತು. 'ಇಂದು' ಕನ್ನಡದಲ್ಲಿ ವಿಮರ್ಶೆಯ ಮಾನದಂಡಗಳು ಬದಲಾಗಿವೆ. ನನ್ನ ದೃಷ್ಟಿಯಲ್ಲಿ ಕೃತಿಯೊಂದರ ರೂಪಕ–ಪ್ರತಿಮೆಗಳನ್ನು ಕೇವಲ ಅರ್ಥದ ದೃಷ್ಟಿಯಿಂದ ಕಾಣದೆ ಸಾಂಸ್ಕೃತಿಕ ಆಯಾಮಗಳಲ್ಲಿ ಕಾಣುವುದು ಇಂದಿನ ಅಗತ್ಯ. ಆ ಕಾರಣದಿಂದಲೇ ನಮ್ಮ ಓದಿನ ವಿಧಾನಗಳ ದಾರಿಗಳನ್ನು ಪ್ರತೀ ಬಾರಿಯೂ ಹೊಸದಾಗಿ ಕಂಡುಕೊಳ್ಳಬೇಕು. ಹೀಗಾಗಿಯೇ, ಪರಂಪರೆಯನ್ನು ಗೌರವಿಸುತ್ತಲೇ ಲಂಕೇಶರಂಥ ಲೇಖಕರನ್ನು ಅಧ್ಯಯನ ಮಾಡಲು ಹೊಸಮಾರ್ಗಗಳನ್ನು ಹುಡುಕಬೇಕಾಗುತ್ತದೆ. ಯಾವುದೇ ಲೇಖಕ ಪರಂಪರೆಯನ್ನು ತನಗರಿವಿಲ್ಲದಂತೆಯೇ ಒಳಗು ಮಾಡಿಕೊಂಡಿರುತ್ತಾನೆ. ಇಲ್ಲವೇ ಹಿಂದಿನ ಮಾರ್ಗಗಳನ್ನು ಮುರಿದುಕಟ್ಟುವಲ್ಲಿ ಸದಾ ಯತ್ನಿಸುತ್ತಾನೆ. ಬಿ.ಎಂ.ಶ್ರೀ, ಗೋವಿಂದಪೈ, ಕುವೆಂಪು, ಬೇಂದ್ರೆ, ಪುತಿನ ಮುಂತಾದವರು ಮಾಡಿದ್ದು ಇದನ್ನೇ ಅಲ್ಲವೇ?.

ಕಥನಕ್ಕೆ ಸಂಬಂಧಪಟ್ಟ ಚರ್ಚೆ ನಡೆಸುವಾಗ ಮಾಸ್ತಿಯವರನ್ನು ದೊಡ್ಡ ಆವರಣದಲ್ಲಿಡಲಾಗಿದೆ. ಮಾಸ್ತಿ ಮುಖೇನವೇ ಕನ್ನಡ ಕಥಾಪರಂಪರೆಯನ್ನು ಸಾಕಷ್ಟು ಹಿರಿಯ ವಿಮರ್ಶಕರು ವಿಶ್ಲೇಷಣೆ ನಡೆಸಿದ್ದಾರೆ. ಕಥೆಯನ್ನು 'ಹೇಳುವ' ವಿಧಾನಗಳು, ಆರಿಸಿಕೊಂಡ ಕೆಲ ಅಪರೂಪದ ವಸ್ತುಗಳಿಂದ ಮಾಸ್ತಿಯವರನ್ನು ಕನ್ನಡ ಕಥನ ಜಗತ್ತಿನಲ್ಲಿ ವಿಶಿಷ್ಟವಾಗಿಸಿದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಸ್ವತಃ ಲಂಕೇಶರೇ ಕಾಲಕ್ಕೆ ತಕ್ಕಂತೆ ಇವರ ಮೇಲಿದ್ದ ಅಭಿಪ್ರಾಯಗಳನ್ನು ಗೌರವದಿಂದಲೇ ಬದಲಿಸಿಕೊಳ್ಳುತ್ತಾರೆ. ಅವರು ತಮ್ಮ 'ಪ್ರಸ್ತುತ' ಎಂಬ ಗದ್ಯಬರಹಗಳ ಸಂಕಲನದಲ್ಲಿ, 'ಮೊಸರಿನ ಮಂಗಮ್ಮ' ಕಥೆಯ ಕುರಿತು ಹೀಗೆ ಬರೆಯುತ್ತಾರೆ: "ಮಾಸ್ತಿಯವರ 'ಮೊಸರಿನ ಮಂಗಮ್ಮ' ತಗೊಳ್ಳಿ. ಅದು ನಾನು ಮೆಚ್ಚುವ ಸವತೇಕಾಯಿ ತರಹದ ಕಥೆ. ಅತ್ತೆ, ಸೊಸೆ, ಮಗ, ಮೊಮ್ಮಗ – ಇವರ ನಡುವಿನ ಘರ್ಷಣೆಯನ್ನು ಕುರಿತದ್ದು. ತುಂಬ ನಾಟಕೀಯವಾಗಿ ಕುತೂಹಲಕಾರಿಯಾಗಿ ಕಥೆ ಹೇಳಿದ್ದಾರೆ. ಜೊತೆಗೆ ಮಾಸ್ತಿಯವರ ಮಾನವೀಯತೆಯೂ ಅದಕ್ಕೆ ಮೆರುಗು ಕೊಟ್ಟಿದೆ. ಆದರೆ, ಅದರ ಹೆಚ್ಚುಗಾರಿಕೆ ಕೆಲವು ಪಾತ್ರಗಳ ಮೇಲೆ, ಅವಕ್ಕೆ ಸಂಬಂಧಿಸಿದ ಒಂದು ಘಟನೆಯ ಮೇಲೆ ನಿಂತಿದೆ. ಈ ಪಾತ್ರಗಳು ಮತ್ತು ಘಟನೆಯನ್ನು ಸುಲಭವಾಗಿ ಇನ್ನೊಂದು ರೀತಿಯಲ್ಲಿ– ಇನ್ನಷ್ಟು ಚೆನ್ನಾಗಿ ಅಥವ ಕೆಟ್ಟದಾಗಿ– ಬರೆಯಬಹುದು. ಇಂಥ ಕಥೆಯನ್ನು ಸಲೀಸಾಗಿ ಹೇಳಬಿಡಬಹುದು. ಇದೊಂದು ತರ ಗಾಸಿಪ್. ಅಂದಹಾಗೆ, ಹೇಳುವುದು ತಪ್ಪು– ಯಾಕೆಂದರೆ ಕೇಳಿದವನು ಬರೆದುಬಿಟ್ಟರೆ! ಅದು ನಿಜಕ್ಕೂ ಯಾರ ಕಥೆಯೆಂದು ನಿರ್ಧರಿಸುವುದಕ್ಕೆ ಕೋರ್ಟಿಗೆ ಹೋಗಬೇಕಾಗುತ್ತೆ: ಯಾಕೆಂದರೆ ಲೇಖಕನ ರಕ್ತದಿಂದ ಹುಟ್ಟಿದ್ದಲ್ಲ ಆ ಕಥೆ..." ಈ ಕಥೆಯ ಮಟ್ಟಿಗೆ ಲಂಕೇಶರ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದು. ಆದರೆ, ಮಾಸ್ತಿಯವರ 'ವೆಂಕಟಶಾಮಿಯ ಪ್ರಸಂಗ', 'ವೆಂಕಟಿಗನ ಹೆಂಡತಿ', 'ಜೋಗ್ಯೋರ ಅಂಜಪ್ಪನ ಕೋಳಿಕತೆ' ಮುಂತಾದವು ಬೇರೊಬ್ಬರಿಂದ 'ಕೇಳಿ' 'ಹೇಳಿದ' ಕಥೆಗಳಂತೆ ಕಂಡರೂ, ಅವುಗಳ ಒಳಗಿನ ಮನುಷ್ಯನ ತೀರ್ಮಾನಗಳು, ಕ್ವಚಿತ್ತಾಗಿ ಕಾಣುವ ಮಾನಸಿಕ ಘರ್ಷಣೆಗಳು ಜೀವನದರ್ಶನವನ್ನು